ಶ್ರೀಮತಿ ಅನಿತಾ ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನ ಮಧುಗಿರಿ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಆರೋಗ್ಯ ಸಚಿವರಲ್ಲಿ ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅವರು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಒಂದು clarification ಬೇಕಾಗಿತ್ತು. ಗೈನೊಕಾಲಜಿಸ್ಟ್ ಒಬ್ಬರನ್ನು ಅಲ್ಲಿ ಹಾಕಿದ್ದಾರೆ, ಆದರೆ ಅವರು ಹಾಜರಾಗುತ್ತಿಲ್ಲ, ಜನರಿಗೆ ಬಹಳ ತೊಂದರೆಯಾಗುತ್ತಿದೆ. ಹೆಂಗಸರು ಹೆರಿಗೆಗೆ ಎಂದು ಬಂದಾಗ ಅಲ್ಲಿ ಡಾಕ್ಟರ್ ಇಲ್ಲವೆಂದರೆ ಬಹಳ ತೊಂದರೆಯಾಗುತ್ತಿದೆ. ಅವರು ಅಲ್ಲಿಂದ ತುಮಕೂರಿಗೆ ಹೋಗಬೇಕಾಗುತ್ತದೆ. ಅವರಿಗೆ ಹೆರಿಗೆ ನೋವು ಬಂದಾಗ ಅಲ್ಲಿಯವರೆಗೆ ಹೋಗುವುದು ಬಹಳ ತೊಂದರೆಯಾಗುತ್ತದೆ. ನಮ್ಮ ಕ್ಷೇತ್ರದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಆರೋಗ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶ್ರೀರಾಮುಲು: ಮಾನ್ಯ ಅಧ್ಯಕ್ಷರೆ, ನಮ್ಮ ಮಧುಗಿರಿ ಕ್ಷೇತ್ರದ ಶಾಸಕಿಯಾದ ಶ್ರೀಮತಿ ಅನಿತಾ ಕುಮಾರಸ್ವಾಮಿಯವರು ಅವರ ಕ್ಷೇತ್ರಕ್ಕೆ ಗೈನೊಕಾಲಜಿಸ್ಟ್ ಡಾಕ್ಟರ್ ಪೋಸ್ಟಿಂಗ್ ಆಗಿದ್ದರೂ ಕೂಡ ಬರುತ್ತಿಲ್ಲವೆಂದು ಈ ಸಭೆಗೆ ಮಾಹಿತಿ ಕೊಟ್ಟಿದ್ದಾರೆ, ತಕ್ಷಣವೇ ಯಾರು ಗೈನೊಕಾಲಜಿಸ್ಟ್ ಬರುತ್ತಿಲ್ಲ ಅವರು ಬರದೇ ಇದ್ದರೆ ಬೇರೆಯವರಿಗೆ ಹಾಕಿ ಕೊಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಹಾಸಿಗೆ ಕಡಿಮೆ ಇರುವ ಬಗ್ಗೆ

1024 ಶ್ರೀ ವೀರಭದ್ರ ಹಾಲಹರವಿ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಹಾಸಿಗೆಗಳು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಒಳರೋಗಿಗಳಿಗೆ ಹಾಸಿಗೆಗಳು ಕಡಿಮೆ ಇರುವುದರಿಂದ ಇನ್ನೂ 100 ಹಾಸಿಗೆಗಳನ್ನು ಹೆಚ್ಚಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು;

ಇ) ಉಚಿತವಾಗಿ ಸಿಗುವ ಔಷಧೋಪಚಾರವನ್ನು ವೈದ್ಯರು ಹೊರಗಡೆಯಿಂದ ತರಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ಬಡಕುಟುಂಬಗಳಿಗೆ ತೊಂದರೆ ಆಗುವುದಿಲ್ಲವೆ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ತುರ್ತು ಕ್ರಮಗಳೇನು?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಹೌದು.

ಆ) ಹೌದು ಸರ್ಕಾರದ ಗಮನದಲ್ಲಿದೆ.

ಇ) ಸರ್ಕಾರದ ಗಮನಕ್ಕೆ ಬಂದಿಲ್ಲ. ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ವೀರಭದ್ರಪ್ಪ ಹಾಲಹರವಿ: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ಕೇಳಲಿಕ್ಕೆ ಅವಕಾಶವನ್ನು ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯು ಉತ್ತರ ಕರ್ನಾಟಕ ಭಾಗದ ಬಡ ಜನತೆಗೆ ಮತ್ತು ರೋಗಿಗಳಿಗೆ ಮುಖ್ಯ ಜೀವನಾಡಿಯಾಗಿದೆ. 1989ರಲ್ಲಿ 790 ಹಾಸಿಗೆ, 2004ರಲ್ಲಿ 1200 ಹಾಸಿಗೆ ಏರಿಕೆಗೆ ಸರ್ಕಾರ ಅನುಮತಿ ನೀಡಿತ್ತು. 2006–07ನೇ ಸಾಲಿನಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಯಿತು. ಈಗ 1200 ಹಾಸಿಗೆಗೆ ಅಧಿಕೃತ ಸರ್ಕಾರಿ ಆದೇಶ ಹೊರಡಿಸಬೇಕಾಗಿದೆ. ಇದಕ್ಕೆ ತಕ್ಕಂತೆ ಸಿಬ್ಬಂದಿ ಹುದ್ದೆಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಬೇಕು. ಇದಕ್ಕೆ ತಕ್ಕಂತೆ ಅನುದಾನವನ್ನು ಸಹ ನೀಡಬೇಕು. ಅದಕ್ಕೆ ಮಾನ್ಯ ವೈದ್ಯಕೀಯ ಸಚಿವರಲ್ಲಿ ನಾನು ಕೇಳುತ್ತೇನೆ.

ಶ್ರೀ ರಾಮಚಂದ್ರಗೌಡ: ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಅಲ್ಲಿ ಅಧಿಕೃತವಾಗಿ 790 ಹಾಸಿಗೆಗಳಿವೆ. ಆದರೆ practically 1200 beds ಇವೆ. ಇದನ್ನು ನೋಡಿಯೇ MCIನವರು 100 ಸೀಟ್ಸ್ ಇದ್ದದ್ದನ್ನು 150 ಸೀಟ್ಸ್‌ಗೆ ಮಾಡಿಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಇದಕ್ಕೆ ಬೇಕಾಗಿರತಕ್ಕಂಥ ಸಿಬ್ಬಂದಿಯನ್ನು ಕೊಡಬೇಕೆಂದು ಅಪೇಕ್ಷೆ ಪಟ್ಟಿದ್ದಾರೆ. ಈಗಾಗಲೇ ಅದರ ಬಗ್ಗೆ ಚರ್ಚೆಯಾಗಿದೆ. ಸಿಬ್ಬಂದಿಗಳನ್ನು ಅಲ್ಲಿಗೆ ಕೊಡುತ್ತೇವೆ. ಅಲ್ಲಿ ಇರತಕ್ಕಂಥ ಎಲ್ಲಾ ಕೊರತೆಗಳನ್ನು ನಾವು ನೀಗಿಸುತ್ತೇವೆ. ಈಗ ಅಲ್ಲಿ ಎಲ್ಲಾ ವ್ಯವಸ್ಥೆ ಸರಿಯಾಗಿದೆ. ನಮ್ಮ ಮಾರ್ಗಸೂಚಿ ಪ್ರಕಾರ ಏನೆಲ್ಲಾ ಔಷಧಿಗಳನ್ನು ಕೊಡಬೇಕೋ, ಅವೆಲ್ಲವೂ ಅಲ್ಲಿಗೆ ಸರಬರಾಜು ಆಗುತ್ತಿವೆ. ಅಲ್ಲಿಗೆ Director ರೊಬ್ಬರು ಹೊಸದಾಗಿ ಬಂದಿದ್ದಾರೆ. ಆದ್ದರಿಂದ, ಇನ್ನು ಮುಂದೆ ಅಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ ಎಂಬ ಭರವಸೆಯನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೀರಭದ್ರಪ್ಪ ಹಾಲಹರವಿ: ಮಾನ್ಯ ಸಚಿವರು ಅಲ್ಲಿ ಯಾವುದೇ ಔಷಧಿಯ ಕೊರತೆ ಇಲ್ಲವೆಂದು ಹೇಳಿದರು. ಆದರೆ, ನಾನು ಸ್ಥಳೀಯವಾಗಿ ಅಲ್ಲಿ ವಾಸಿಯಾಗಿರುವುದರಿಂದ, ನನಗೆ ತಿಳಿದ ಮಟ್ಟಿಗೆ ಔಷಧಕ್ಕೆ ಹೊರಗಡೆ

ಬರೆದು ಕೊಡುವಂತಹ ವ್ಯವಸ್ಥೆ ಇದುವರೆಗೆ ಮುಂದುವರೆದಿದೆ. ಆ ಕಾರಣ ಇದನ್ನು ತಡೆಯಲಿಕ್ಕೆ ಸರ್ಕಾರದ ಮಟ್ಟದಲ್ಲಿ ಔಷಧ ಮತ್ತು ರೋಗಿಗಳಿಗೆ ಊಟೋಪಚಾರ, ಹಾಸಿಗೆ, ಹೊದಿಕೆಗಳ ಖರೀದಿಗೆ ರಾಜ್ಯ ಮಟ್ಟದಲ್ಲಿ ಇದಕ್ಕೆ 5 ಕೋಟಿ ರೂ.ಗಳ ಪ್ರತ್ಯೇಕ ಅನುದಾನವನ್ನು ಒದಗಿಸಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ರಾಮಚಂದ್ರ ಗೌಡ: ಅದಕ್ಕಾಗಿ ಈಗಾಗಲೇ ನಮ್ಮ planನಲ್ಲಿ 18 ಕೋಟಿ ರೂ.ಗಳಿದೆ. Non-Planನಲ್ಲಿ 26.8 ಕೋಟಿ ರೂ.ಗಳಷ್ಟು ಹಣ ಈಗಾಗಲೇ ಬಿಡುಗಡೆಯಾಗುತ್ತಿದೆ. ಯಾವುದೇ ಕೊರತೆ ಇದ್ದರೂ ಸಹ, ಎಲ್ಲಾ ಕೊರತೆಗಳನ್ನು ನೀಗಿಸುತ್ತೇವೆ. ಕಾನೂನು ಬದ್ಧವಾಗಿ ನಮ್ಮ ಯಾವ ಔಷಧಿಗಳನ್ನು ಸರ್ಕಾರದಿಂದ ಸರಬರಾಜು ಮಾಡಬೇಕೋ, ಅದೆಲ್ಲಾ ಔಷಧಿಗಳು ಸರಬರಾಜು ಆಗುತ್ತಿವೆ. ಯಾವುದಾದರೂ ವಿಶೇಷವಾದಂತಹ ಔಷಧಿಗಳು ಬೇಕಾದಾಗ ಮಾತ್ರ, ಅದನ್ನು ಬರೆದು ಕೊಡುವಂತಹ ಪದ್ಧತಿ ಇಡೀ ರಾಜ್ಯದಲ್ಲಿದೆ. ಆ ಪದ್ಧತಿಯೂ ಇಲ್ಲಿ ಇದೆ.

ಅಧ್ಯಕ್ಷರು: ಮಾನ್ಯ ರಾಮಚಂದ್ರಗೌಡರೆ, ತಾವು ಒಂದು ದಿವಸ ಅಲ್ಲಿಗೆ ಬಂದು full day ಅಲ್ಲೊಂದು review meeting ಮಾಡಿ. ಅದರಿಂದಾಗಿ ಅಲ್ಲಿಯ ಬಹಳಷ್ಟು ಸಮಸ್ಯೆಗಳಿಗೆ ಹೆಚ್ಚಿನ ಪರಿಹಾರ ಸಿಗುತ್ತದೆ.

ಶ್ರೀ ರಾಮಚಂದ್ರ ಗೌಡ: ಆಯಿತು.

ಶ್ರೀ ವೀರಭದ್ರಪ್ಪ ಹಾಲಹರವಿ: ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ಕಿಮ್ಸ್‌ನಲ್ಲಿ ಹೆರಿಗೆ ವಾರ್ಡ್ ಇದ್ದು, ಪ್ರತ್ಯೇಕ ಕಟ್ಟಡ ಇಲ್ಲ. ಈ ಒಂದು ಕಾರಣದಿಂದ ಹೆರಿಗೆಗೆ ಬರತಕ್ಕಂಥ ಬಡ ಹೆಣ್ಣು ಮಕ್ಕಳು ಅಲ್ಲಿ ಹಾಸಿಗೆ ಸಿಗಲಾರದೆ, ನೆಲದಲ್ಲಿ ಎರಡು ತಾಸುಗಟ್ಟಲೆ ಕುಳಿತಿರುತ್ತಾರೆ. ಒಂದರ್ಧ ಗಂಟೆಯಲ್ಲಿ ಹೆರಿಗೆ ಆಗತಕ್ಕಂಥ ಈ ಪ್ರಸವ ವೇದನೆ ಸಂದರ್ಭದಲ್ಲಿ ಅವರಿಗೆ ತೊಂದರೆಯಾಗುತ್ತಿದೆ. ಅದಕ್ಕಾಗಿ ಮಾನ್ಯ ಸಚಿವರು ಹೆರಿಗೆ ವಾರ್ಡ್‌ಗೆ ಪ್ರತ್ಯೇಕ ಕಟ್ಟಡ ಕಟ್ಟಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು. ಆಸ್ಪತ್ರೆ ಒಳಗೆ ಮತ್ತು ಹೊರಗಿನ ಸ್ವಚ್ಛತೆ ಬಗ್ಗೆ ಪ್ರತ್ಯೇಕವಾದ ಗುತ್ತಿಗೆದಾರರನ್ನು ನೇಮಕ ಮಾಡಬೇಕು. ಅಲ್ಲ ನರ್ಸಿಂಗ್ ಕಾಲೇಜ್ ಇದ್ದು, ಆ ಪ್ರಸ್ತುತ ನರ್ಸಿಂಗ್ ಕಾಲೇಜಿನ ಅಗತ್ಯ ಬೋಧಕ ಸಿಬ್ಬಂದಿಯನ್ನು ಮಂಜೂರು ಮಾಡುವ ಬಗ್ಗೆ ಮಾನ್ಯ ಸಚಿವರ ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ರಾಮಚಂದ್ರ ಗೌಡ: ಮಾನ್ಯ ಸದಸ್ಯರು ಹೇಳಿದಂತೆ ಎಲ್ಲದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಎಲ್ಲಾ ಔಷಧಿ ಅಲ್ಲಿಗೆ ಸರಿಯಾದ ರೀತಿಯಲ್ಲಿ supply ಆಗುತ್ತಿದೆ' ಎಂದು ಈಗ ಹೇಳಿದ್ದಾರೆ. ನನ್ನ ಮಾಹಿತಿ ಪ್ರಕಾರ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಸನ್ಮಾನ್ಯ ಸದಸ್ಯರಾದ ವೀರಭದ್ರಪ್ಪನವರು ಹೇಳಿದಂತೆ, ಔಷಧಿ ಸರಿಯಾಗಿ ಸಿಗುತ್ತಿಲ್ಲ. ಡಾಕ್ಟರ್ಸ್‌ಗಳು ಆಚೆಯಿಂದ ಔಷಧಿಯನ್ನು ತೆಗೆದುಕೊಂಡು ಬನ್ನಿ ಎಂದು ಬರೆದು ಕೊಡುತ್ತಿದ್ದಾರೆ. ನನಗೆ ಆಶ್ಚರ್ಯ ಏನೆಂದರೆ, ನಾನು ತಮಗೆ ನಾಳೆಯೇ ಮಾನ್ಯ ಸಚಿವರು ನೀಡಿದಂತಹ ಹೇಳಿಕೆಯೊಂದನ್ನು ತಂದು ಕೊಡುತ್ತೇನೆ. ಅದರ ಬಗ್ಗೆ ಪೇಪರ್‌ನಲ್ಲೆಲ್ಲಾ ವರದಿಯಾಗಿದೆ. ಮಾನ್ಯ ರಾಮಚಂದ್ರಗೌಡರವರು open ಆಗಿ function ಮೊಂದರಲ್ಲಿ 'ಇಲಾಖೆಯು ಆಸ್ಪತ್ರೆಗಳಿಗೆ supply ಮಾಡುತ್ತಿರುವ ಔಷಧಿಗಳಲ್ಲಿ ಶೇಕಡ 40ರಷ್ಟು ವಾಪಸ್ chemist ಅಂಗಡಿಗೆ ಹೋಗುತ್ತಿದೆ' ಎಂದು ಹೇಳಿದ್ದಾರೆ. ಶೇಕಡ 40ರಷ್ಟು medicines ವಾಪಸ್ chemist ಅಂಗಡಿಗೆ ಹೋಗುತ್ತಿದ್ದರೆ, ಅದೇನು drug cartel? ಇದರ ಬಗ್ಗೆ ಮಾನ್ಯ ಸಚಿವರು ಸದನಕ್ಕೆ ಸ್ವಲ್ಪ ಬೆಳಕು ಚೆಲ್ಲಬೇಕು.

ಶ್ರೀ ರಾಮಚಂದ್ರ ಗೌಡ: ಮಾನ್ಯ ಅಧ್ಯಕ್ಷರೆ, ಬಹಳ ಎಚ್ಚರಿಕೆಯಿಂದ ಹೇಳಿರುವಂತಹ ಮಾತದು. ಏಕೆಂದರೆ, ಹಿಂದಿನಿಂದ ನಡೆದು ಬಂದಿರುವಂತಹ ಪದ್ಧತಿಯೊಳಗೆ ಆ ರೀತಿ ಆಗುತ್ತಿತ್ತು ಎಂದು ನಾನು ವಿರೋಧ ಪಕ್ಷದಲ್ಲಿದ್ದಾಗ ಎಲ್ಲಾ ಮಾಹಿತಿಯನ್ನು ತರಿಸಿ ಮಾತನಾಡಿದ್ದೆ. ತದ ನಂತರ ನಾನು ಹೇಳುವಾಗ, 'ಈ ರೀತಿಯಾಗಿ ವಿಚಾರ ಅಥವಾ ಸುದ್ದಿ ಬಂದಿದೆ, ದಯಮಾಡಿ ಇದರ ಬಗ್ಗೆ ಎಚ್ಚರಿಕೆಯಿಂದ ಇರಬೇಕು' ಎಂದು ಹೇಳಿದ್ದ ಮಾತನ್ನು ಪತ್ರಕೆಯಲ್ಲಿ ಬರೆಯುವಾಗ ಹಾಗೆ ಬರೆದಿದ್ದಾರೆ. ನಾನು ಈಗ ಪರಿಶೀಲನೆ ಮಾಡಲಾಗಿ, ಇವತ್ತು ಆ ರೀತಿಯಾಗಿ ಯಾವುದೂ ನಡೆಯುತ್ತಿಲ್ಲ.

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, 'Government hospital's stock landing in private drug stores' ಎಂಬ ಶೀರ್ಷಿಕೆ ಅಡಿಯಲ್ಲಿ ಮಾನ್ಯ ಸಚಿವರು ಹೇಳಿದ್ದು ಪತ್ರಿಕೆಯಲ್ಲಿ ವರದಿಯಾಗಿದೆ.